# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1439
2. ಸದಸ್ಯರ ಹೆಸರು : ಶ್ರೀಎಂ. ನಾಗರಾಜು
3. ಉತ್ತರಿಸ ಬೇಕಾದ ದಿನಾಂಕ : 18.12.2025
4. ಉತ್ತರಿಸುವವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) ಈ ಕೆರೆಗಳಲ್ಲಿಎಷ್ಟು ಕೆರೆಗಳು ಒತ್ತುವರಿ ಆಗಿವೆ; ಒತ್ತುವರಿಗೆ ಒಳಪಡದಿರುವ ಕೆರೆಗಳ ಸಂಖ್ಯೆ ಎಷ್ಟು; | ಕರ್ನಾಟಕ ರಾಜ್ಯದಲ್ಲಿ ಒಟ್ಟು 41,849 ಕೆರೆಗಳು ಇರುತ್ತವೆ. ಈ ಕೆರೆಗಳ ಪೈಕಿ 40,926 ಕೆರೆಗಳ ಸರ್ವೆ ಕಾರ್ಯ ಪೂರ್ಣಗೊಳಿಸಿದ್ದು, 15,048 ಕೆರೆಗಳಲ್ಲಿ ಒತ್ತುವರಿಯನ್ನು ಕಂಡುಬಂದಿರುತ್ತದೆ ಹಾಗೂ 25,878 ಕೆರೆಗಳಲ್ಲಿ ಒತ್ತುವರಿ ಕಂಡುಬಂದಿರುವುದಿಲ್ಲ (ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ) |
| ಆ | ಈ ಕೆರೆಗಳಲ್ಲಿ ಮಳೆಗಾಲದ ನಂತರ ಸಾಕಷ್ಟು ಹೂಳು ತುಂಬಿಕೊಳ್ಳುತ್ತಿದ್ದು, ಸದರಿ ಹೂಳು ಎತ್ತಿಹಾಕಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಕೆರೆಗಳ ಅಭಿವೃದ್ಧಿ ಮತ್ತು ಕೆರೆಗಳ ಆಧುನೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಆಧ್ಯತೆಮೇರೆಗೆ ಅನುದಾನ ಬಿಡುಗಡೆಯಾಗುತ್ತಿದೆ. ಅದರಂತೆ, ಬಿಡುಗಡೆಯಾಗುವ ಅನುದಾನಕ್ಕೆನುಗುಣವಾಗಿ ಕೆರೆಗಳ ಅಭಿವೃಧ್ಧಿ ಕಾರ್ಯ ಹಾಗು ಕೆರೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆಗೆಯಲು ಅಂದಾಜು ಪಟ್ಟಿಗಳಲ್ಲಿ ಅನುವು ಮಾಡಿಕೊಂಡು ಹೂಳೂ ತೆಗೆಯಲು ಹಾಗೂ ಕೆರೆಗಳನ್ನು ಅಭಿವೃಧ್ಧಿ ಪಡಿಸಲು ಕ್ರಮ ವಹಿಸಲಾಗುತ್ತಿದೆ.<br><br>ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿರುವ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೆರೆ ಸಂಜೀವಿನಿ ಯೋಜನೆಯ ಅನುಷ್ಠಾನಕ್ಕೆ ಅನುದಾನ ಯೋಜನೆಯನ್ನು ಹಂಚಿಕೆಯಾಗಿದ್ದು, "ಕೆರೆ ಸಂಜೀವಿನಿ" 2017-18 ನೇ ಸಾಲಿನಿಂದ ಪ್ರಾರಂಭಿಸಲಾಗಿರುತ್ತದೆ. ಸರ್ಕಾರದಿಂದ ಹಂಚಿಕೆಯಾಗುವ ಅನುದಾನದ್ವಯ ಕ್ರಿಯಾ ಯೋಜನೆಯನ್ನು ತಯಾರಿಸಿ, ಅದರನ್ವಯ ಈ ಯೋಜನೆಯನ್ನು ಸಮುದಾಯದ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗಿದ್ದು, ರೈತರು ಸ್ವಂತ ಖರ್ಚಿನಲ್ಲಿ ಹೂಳು ಸಾಗಾಣೆ ವೆಚ್ಚವನ್ನು ಭರಿಸುತ್ತಿದ್ದು, ಜೆ.ಸಿ.ಬಿ ವಾಹನದ ಬಾಡಿಗೆ ಮೊತ್ತವನ್ನು ಮಾತ್ರ ಪಾವತಿ ಮಾಡಲಾಗಿರುತ್ತದೆ.<br><br>ಸದರಿ ಯೋಜನೆಯಡಿ ಕಳೆದ 2017-18 ರಿಂದ 2023-24 ರವರೆಗೆ ಕ್ರಿಯಾ ಯೋಜನೆಯನ್ವಯ ಅನುಮೋದನೆಯಾಗಿರುವ 2579 ಕೆರೆಗಳಲ್ಲಿ ಅನುದಾನಕ್ಕೆ ಸೀಮಿತಗೊಳಿಸಿ ಹೂಳನ್ನು ತೆಗೆಯಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ : MID 63 FIM 2024, ದಿನಾಂಕ : 13.12.2024 ರನ್ವಯ ಕೆರೆ ಸಂಜೀವಿನಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ. |

| | | |
|---|---|---|
| ಇ | ಕೆರೆಗಳ ನಿರ್ವಹಣೆ, ಜಲ ಸಂರಕ್ಷಣೆಗಳಲ್ಲಿ ಕಂಡುಬರುವ ಸಮಸ್ಯೆಗಳೇನು ಮತ್ತು ಅವುಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕೆರೆಗಳ ನಿರ್ವಹಣೆಯಲ್ಲಿ ಕೆರೆಯಂಗಳದ ಒತ್ತುವರಿ ಸೇರಿದಂತೆ ಕೆರೆಗೆ ಸೇರುತ್ತಿರುವ ಕಲುಷಿತ ನೀರು ಪ್ರಮುಖ ಸಮಸ್ಯೆಯಾಗಿರುತ್ತದೆ.<br><br>ರಾಜ್ಯದ ಎಲ್ಲಾ ಕೆರೆಗಳ ಸರ್ವೆ ಕಾರ್ಯ, ಒತ್ತುವರಿ ತೆರವುಗೊಳಿಸುವ ಕಾರ್ಯ ಸೇರಿದಂತೆ. ಸಂರಕ್ಷಣೆ ಮತ್ತು ಪುನರ್ ಜೀವನಗೊಳಿಸುವ ಅಂಶಗಳನ್ನು ಪಾಲಿಸಲು ಹಾಗೂ ಅವುಗಳ ಅನುಷ್ಠಾನ ಪ್ರಕ್ರಿಯೆಗಳ ಪ್ರಗತಿಯ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಮತ್ತು ಕೆರೆಗಳ ಬಗ್ಗೆ ಸ್ವೀಕೃತವಾಗುವ ದೂರು ಅರ್ಜಿ, ಇತ್ಯಾದಿ ಕುಂದು-ಕೊರತೆಗಳನ್ನು ಪರಿಶೀಲಿಸಿ ಸಮಯಾನುಸಾರ ಕೆರೆಗಳ ಸುಪರ್ಧಿ ಹೊಂದಿರುವಂತಹ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 817/2008 ರ ಅಂತಿಮ ಆದೇಶ ದಿನಾಂಕ:11.04.2012 ದನ್ವಯ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಅಪೆಕ್ಸ್ ಸಮಿತಿಯನ್ನು ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕೆರೆ ಸಂರಕ್ಷಣಾ ಸಮಿತಿಯನ್ನು ರಚಿಸಲಾಗಿರುತ್ತದೆ.<br><br>ಅದರಂತೆ, ಕೆರೆಗಳ ಉಸ್ತುವಾರಿ ಇಲಾಖೆಗಳು ಕಂದಾಯ ಇಲಾಖೆಯ ಸಹಯೋಗದೊಂದಿಗೆ ಕೆರೆಗಳ ಒತ್ತುವರಿಗಳನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸಲು ಕ್ರಮವಹಿಸುತ್ತಿವೆ. |
| ಈ | ಮುಂಬರುವ ಬೇಸಿಗೆಕಾಲದಲ್ಲಿ ಕೆರೆಗಳು ಮತ್ತು ಕಾಲುವೆಗಳು ಬತ್ತಿ ಹೋಗದಂತೆ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು? | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿಯ ಬಹುತೇಕ ಕೆರೆಗಳು ಮಳೆಯಾಶ್ರಿತ ಕೆರೆಗಳಾಗಿದ್ದು, ಬೇಸಿಗೆಕಾಲದಲ್ಲಿ ಶೇಖರಣೆಗೊಂಡ ನೀರಿನ ಪ್ರಮಾಣವು ಕಡಿಮೆಯಾಗುತ್ತದೆ. ಬೇಸಿಗೆಕಾಲದಲ್ಲೂ ಕೆರೆಗಳಲ್ಲಿ ಮತ್ತು ಕಾಲುವೆಗಳಲ್ಲಿ ನೀರು ಬತ್ತಿಹೋಗದಂತೆ ತಡೆಗಟ್ಟಲು ಸರ್ಕಾದಿಂದ ಲಭ್ಯವಾಗುವ ಅನುದಾನಕ್ಕನುಗುಣವಾಗಿ ಸದರಿ ಕೆರೆಗಳಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರು ತುಂಬಿಸಲು ಕ್ರಮ ವಹಿಸಲಾಗುತ್ತಿದೆ. ಮುಂದುವರೆದು, ಕೆರೆಗಳ ತೂಬುಗಳಿಂದ ನೀರನ್ನು ನೀರಾವರಿ ಸೌಲಭ್ಯಕ್ಕಾಗಿ ವದಗಿಸದಂತೆ ಜಿಲ್ಲಾಧಿಕಾರಿಗಳ ನಿರ್ದೇಶನಗಳ ಮೇರೆಗೆ ತೂಬುಗಳನ್ನು ಮುಚ್ಚಲಾಗುತ್ತಿದೆ. |

MID/135/LAQ/2025

**(ಎನ್.ಎಸ್. ಬೋಸರಾಜು)**
ಸಣ್ಣ ನೀರಾವರಿ, ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನ ಸಭಾ ಕ್ಷೇತ್ರ) ರವರ
**ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1439 ಕ್ಕೆ ಸಂಬಂಧಿಸಿದ ಅನುಬಂಧ – 1**

## ಕೆರೆಗಳ ಅಳತೆ ಮತ್ತು ಒತ್ತುವರಿಯ ಜಿಲ್ಲಾವಾರು ಮಾಹಿತಿ

(ಭೂದಾಖಲೆಗಳ ಇಲಾಖೆ ಮತ್ತು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಿದ ಮಾಹಿತಿಯಂತೆ )

| ಕ್ರ.ಸಂ | ಜಿಲ್ಲೆ | ಒಟ್ಟು ಕೆರೆಗಳ ಸಂಖ್ಯೆ | ಅಳತೆಯಾಗಿರುವ ಕೆರೆಗಳ ಸಂಖ್ಯೆ | ಒತ್ತುವರಿ ಗುರುತಿಸಿರುವ ಕೆರೆಗಳ ಸಂಖ್ಯೆ | ಒತ್ತುವರಿಗೆ ಒಳಪಡದಿರುವ ಕೆರೆಗಳ ಸಂಖ್ಯೆ |
|---|---|---|---|---|---|
| 1 | ಹಾಸನ | 6861 | 6796 | 2905 | 3891 |
| 2 | ಕೋಲಾರ | 3232 | 2382 | 1256 | 1126 |
| 3 | ಶಿವಮೊಗ್ಗ | 4792 | 4792 | 1848 | 2944 |
| 4 | ಹಾವೇರಿ | 2058 | 2058 | 451 | 1607 |
| 5 | ಚಿಕ್ಕಬಳ್ಳಾಪುರ | 1533 | 1533 | 496 | 1037 |
| 6 | ಮೈಸೂರು | 2991 | 2984 | 1449 | 1535 |
| 7 | ರಾಮನಗರ | 1475 | 1475 | 841 | 634 |
| 8 | ವಿಜಯನಗರ | 219 | 218 | 91 | 127 |
| 9 | ಚಿಕ್ಕಮಗಳೂರು | 1810 | 1810 | 808 | 1002 |
| 10 | ಧಾರವಾಡ | 1323 | 1323 | 130 | 1193 |
| 11 | ಚಿತ್ರದುರ್ಗ | 437 | 437 | 53 | 384 |
| 12 | ಬಳ್ಳಾರಿ | 107 | 107 | 44 | 63 |
| 13 | ದಾವಣಗೆರೆ | 533 | 533 | 239 | 294 |
| 14 | ತುಮಕೂರು | 2047 | 2047 | 1010 | 1037 |
| 15 | ಬೆಂಗಳೂರು (ಗ್ರಾ) | 710 | 710 | 643 | 67 |
| 16 | ಬೆಂಗಳೂರು (ನ) | 837 | 837 | 730 | 107 |
| 17 | ಉಡುಪಿ | 2030 | 2030 | 58 | 1972 |
| 18 | ಕೊಡಗು | 1127 | 1127 | 288 | 839 |
| 19 | ಚಾಮರಾಜನಗರ | 606 | 606 | 281 | 325 |
| 20 | ದಕ್ಷಿಣ ಕನ್ನಡ | 633 | 633 | 88 | 545 |
| 21 | ಮಂಡ್ಯ | 962 | 962 | 448 | 514 |
| 22 | ಉತ್ತರಕನ್ನಡ | 2118 | 2118 | 448 | 1670 |
| 23 | ಗದಗ | 278 | 278 | 55 | 223 |
| 24 | ವಿಜಯಪುರ | 267 | 267 | 80 | 187 |
| 25 | ಬೆಳಗಾವಿ | 1132 | 1132 | 134 | 998 |
| 26 | ಬಾಗಲಕೋಟೆ | 268 | 268 | 70 | 198 |
| 27 | ಕೊಪ್ಪಳ | 206 | 206 | 15 | 191 |
| 28 | ಕಲಬುರಗಿ | 254 | 254 | 6 | 248 |
| 29 | ಬೀದರ್ | 344 | 344 | 31 | 313 |
| 30 | ಯಾದಗಿರಿ | 340 | 340 | 6 | 334 |
| 31 | ರಾಯಚೂರು | 319 | 319 | 46 | 273 |
| ಒಟ್ಟು | | **41849** | **40926** | **15048** | **25878** |